


ಸ್ಕಾಟ್ಲೆಂಡ್ ಪ್ರವಾಸದ ಸಂದರ್ಭ ಎಡಿನ್‌ಬರೋ ನಗರದಲ್ಲಿ, ಸಾಧಾರಣವಾಗಿ ವೀಕ್ಷಣೆಗೆ ಲಭ್ಯವಿಲ್ಲದ 141 ತಾಣಗಳಿಗೆ ಸೆಪ್ಟಂಬರ್ 23 ಹಾಗೂ 24ರಂದು ಮಾತ್ರ ಮುಕ್ತ ಪ್ರವೇಶವಿದೆ ಎನ್ನುವ ಮಾಹಿತಿ ತಿಳಿದು ಇವುಗಳಲ್ಲಿ ಒಂದಾಗಿದ್ದ ವಿಕ್ಟೋರಿಯನ್ ಸ್ಕೂಲ್ ರೂಂ ಸಂದರ್ಶಿಸಬೇಕೆಂದು ಮನ ಹಂಬಲಿಸಿತು. ಒಂದು ಭಾನುವಾರ ಈ ಶಾಲಾ ಕೊಠಡಿಗೆ ಭೇಟಿ ನೀಡಿ ಶತಮಾನದ ಹಿಂದಿನ ಕಲಿಕಾ ಸಾಧನಗಳ ಮತ್ತು ವಿಧಾನಗಳ ಪ್ರತ್ಯಕ್ಷ ಅನುಭವ ಪಡೆದೆ.

ಶಿಕ್ಷಣ ನಮ್ಮ ಪರಂಪರೆಯ ಅವಿಭಾಜ್ಯ ಅಂಗ. ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವನ್ನು ಶಿಕ್ಷಣ ಮತ್ತು ಸಂಗ್ರಹಾಲಯ ಕ್ಷೇತ್ರಗಳಲ್ಲಿ ಆಸಕ್ತಿಯಿದ್ದ ಹಲವು ವ್ಯಕ್ತಿಗಳು ಮನಗಂಡು 1986–ರಲ್ಲಿ ಮರೆಯಾಗುತ್ತಿದ್ದ ದಿನಬಳಕೆಯ ವಸ್ತುಗಳನ್ನು ಸಂಗ್ರಹಿಸಿದರು. ಶಾಲೆಗಳಲ್ಲಿ ಬಳಸುತ್ತಿದ್ದ ಹಳೆಯ ಹಾಗೂ ಗಟ್ಟಿಮುಟ್ಟಾದ ಪೀಠೋಪಕರಣಗಳು ಮತ್ತು ಪರಿಕರಗಳು ಬಿ.ಬಿ.ಸಿ. ಕಂಪ್ಯೂಟರ್ ಸಹ ಇದರಲ್ಲಿ ಸೇರಿತ್ತು. ಇವುಗಳನ್ನು ಜತನ ಮಾಡಿಕೊಂಡು ಬರುವುದರೊಡನೆ, ಜನಸಾಮಾನ್ಯರೂ ಇವುಗಳ ಪ್ರಯೋಜನ ಪಡೆಯಬೇಕೆಂಬ ಉದ್ದೇಶದಿಂದ 'ಸ್ಕಾಟಿಷ್ ಚಾರಿಟಬಲ್ ಇನ್ಕಾರ್ಪೊರೇಟೆಡ್ ಆರ್ಗನೈಸೇಶನ್' ಜನ್ಮ ತಾಳಿತು.

ಇದರ ಅಂಗಸಂಸ್ಥೆಯಾದ 'ದಿ ಹಿಸ್ಟರಿ ಆಫ್ ಎಜುಕೇಷನ್ ಸೆಂಟರ್', ಲೈತ್ ವಾಕ್ ಪ್ರಾಥಮಿಕ ಶಾಲೆಯ ಆವರಣದಲ್ಲಿ ಒಂದು ಮಾದರಿ ಶಾಲಾ ಕೊಠಡಿ ಮತ್ತು ವಸ್ತುಸಂಗ್ರಹಾಲಯವನ್ನು ನಡೆಸಿಕೊಂಡು ಬರುತ್ತಿದೆ. ಸಾಲಾಗಿ ಜೋಡಿಸಲ್ಪಟ್ಟ ಮರದ ಬೆಂಚುಗಳು, ಸ್ಲೇಟುಗಳು, ಕಪ್ಪುಹಲಗೆ, ಅಬಕಸ್, ಭೂಪಟ, ಲೇಖನಿಗಳು, ಮರದ ಹಿಡಿಯ ಘಂಟೆ, ಶಿಕ್ಷಕರ ವಸ್ತ್ರಗಳಿಗಾಗಿ ಸುಂದರ ಸ್ಟ್ಯಾಂಡ್, ಗ್ಲೋಬ್, ಇಂಗ್ಲಿಷ್ ಅಕ್ಷರಮಾಲೆ, ಮತ್ತು ಇತರ ಪರಿಕರಗಳು ವೀಕ್ಷಕರನ್ನು ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯುತ್ತವೆ.

ವಿಕ್ಟೋರಿಯನ್ ಮತ್ತು ಪ್ರಥಮ ವಿಶ್ವ ಸಮರದ ಯುಗದಲ್ಲಿ ಪ್ರಚಲಿತವಿದ್ದ ಉಡುಗೆ ಧರಿಸಿದ ಶಿಕ್ಷಕರು ಆ ದಿನಗಳ ಪಾಠ ಪದ್ಧತಿ, ರೀತಿ–ನೀತಿಗಳು, ಶಿಸ್ತು, ತಪ್ಪಿಗೆ ನೀಡುತ್ತಿದ್ದ ಕಠಿಣ ಶಿಕ್ಷೆ, ಇತ್ಯಾದಿಗಳ ಪ್ರತ್ಯಕ್ಷ ದರ್ಶನ ಮಾಡಿಸುತ್ತಾರಂತೆ! ಆದರೆ, ಇವುಗಳ ದರ್ಶನಕ್ಕೆ ನನ್ನ ಬಳಿ ಕಾಲಾವಕಾಶವಿರಲಿಲ್ಲ. ಆಗಿನ ಆಟದ ಮೈದಾನದ ಮಾದರಿಯೂ ಇಲ್ಲಿದೆ.

ವಿಕ್ಟೋರಿಯನ್ ಕಾಲದ ಕಲಿಕಾ ವಿಧಾನ ಅರಿತುಕೊಳ್ಳಲು ಉತ್ಸುಕರಾಗಿರುವ ವಿದ್ಯಾರ್ಥಿಗಳಿಗೆ ಸೋಮವಾರದಿಂದ ಗುರುವಾರದವರೆಗೆ ಬೆಳಗಿನ ಎರಡು ತಾಸು ಶಾಲೆ ನಡೆಯುತ್ತದೆ. ನಿರ್ವಹಣೆಗೆ ಬೇಕಾದ ಹಣದ ಪೂರೈಕೆಗಾಗಿ, ಈ ತರಗತಿಯಲ್ಲಿ ಪಾಲ್ಗೊಳ್ಳಲು ಅಲ್ಪ ಶುಲ್ಕ ನಿಗದಿಗೊಳಿಸಿದ್ದಾರೆ. ಈವರೆಗೆ 30,000ಕ್ಕೂ ಅಧಿಕ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಈ ಶಿಕ್ಷಣದ ಅನುಭವ ಪಡೆದಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಕುರಿತಂತೆ ವಿಶೇಷ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳೂ ಈ ಕೇಂದ್ರದ ಸಂಪನ್ಮೂಲಗಳನ್ನು ಬಳಸಿಕೊಂಡಿದ್ದಾರೆ.

ಇನ್ನೊಂದು ಕೊಠಡಿಯಲ್ಲಿ ಆ ದಿನಗಳಲ್ಲಿ ಬಳಸುತ್ತಿದ್ದ ಗೃಹಬಳಕೆಯ ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಇವು ಅಂದಿನ ಕೌಟುಂಬಿಕ ಜೀವನದ ಸ್ಥೂಲ ಪರಿಚಯ ಮಾಡಿಸುತ್ತವೆ. ಹಳೆಯ ಛಾಯಾಚಿತ್ರಗಳು, ಪುಸ್ತಕಗಳು, ಪದಕಗಳು, ಮತ್ತು ಗೃಹಿಣಿಯರು ನಿರ್ಮಿಸಿದ ಗೊಂಬೆಗಳು, ಸವಕಲು ಬೂಟಿನಿಂದ ಮಾಡ–ಲಾದ ಬೊಂಬೆ ಪ್ರದರ್ಶನದಲ್ಲಿವೆ. ಬೂಟಿನ ಹಿಮ್ಮಡಿಗೆ ಮೊಳೆಗಳನ್ನು ಹೊಡೆದು ಈ ಬೊಂಬೆಯ ಮುಖ ರಚಿಸಲಾಗಿದೆ. ಬಡ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ ಕುರಿತ ಚಿತ್ರವೂ ಈ ಸಂಗ್ರಹಾಲಯದಲ್ಲಿದೆ. ●



